

ನೆಪೋಲಿಯನ್ ಗೋಪುರದ ಎದುರಿಗೆ ಲೇಖಕ

ಸೊಕ್ಕಿನಿಂದ ಮೇಲೇರುತ್ತ ಭರ್‍ರನೇ ಕೆಳಗಿಳಿದಾಗೊಂದು ರುಂಡವನ್ನು ಮುಂಡದಿಂದ ಬೇರ್ಪಡಿಸುತ್ತ ಅಟ್ಟಹಾಸಗೈದ ಈ ಆಯುಧ, ಜೂನ್ 1793 ರಿಂದ ಜುಲೈ 1794 ರವರೆಗೆ ಇಡೀ ಫ್ರಾನ್ಸ್‌ಅನ್ನೇ ಭೀತಿಯಲ್ಲಿ ಮುಳುಗಿಸಿಬಿಟ್ಟಿತ್ತು. ಆಗ ಸತ್ತವರೆಷ್ಟೋ, ಸತ್ತವರ ಸಂಬಂಧಿಕರ ಚೀತ್ಕಾರಗಳೆಷ್ಟೋ ಲೆಕ್ಕವಿಟ್ಟವರಾರು?

ವಿಪರ್ಯಾಸವೆಂದರೆ ಈ ಗಿಲೋಟಿನ್ (ಗಿಯೋಟಿನ್) ಎಂಬ ಮಾರಕ ಯಂತ್ರ ಆವಿಷ್ಕಾರವಾದದ್ದೇ ಮಾನವೀಯತೆಯ ಪ್ರತಿಪಾದಕರಿಂದ ಹಾಗೂ ಸಮಾನತೆಯ ಬೆಂಬಲಿಗರಿಂದ! ಇದಕ್ಕೂ ಮೊದಲು ಜಾರಿಯಲ್ಲಿದ್ದ ಮರಣದಂಡನೆಯ ಪದ್ಧತಿಗಳು ಮಾನವೀಯವಾಗುವಂತೆ ಹೊಸ ಪದ್ಧತಿಗಳನ್ನು ಸಂಶೋಧಿಸಬೇಕೆಂದು ಆಂಟೊನಿ ಲೂಯಿ ಎನ್ನುವ ರಾಜವೈದ್ಯನ ಅಧ್ಯಕ್ಷತೆಯ ಸಮಿತಿಯೊಂದನ್ನು ಮಾಡಿದ್ದು, ಮುಂದೆ ಇದೇ ಗಿಲೋಟಿನ್‌ಗೆ ಬಲಿಯಾದ ರಾಜ ಹದಿನಾರನೆಯ ಲೂಯಿಯೇ! ಈ ಸಮಿತಿಯಲ್ಲಿ ಒಬ್ಬ ಸದಸ್ಯನಾಗಿದ್ದ ದೇಹ ರಚನಾಶಾಸ್ತ್ರದ ಪ್ರಾಧ್ಯಾಪಕ ಜೋಸೆಫ್ ಇಗ್ನೇಸ್ ಗಿಲೋಟಿನ್‌ನಿಂದಾಗಿ ಈ ಯಂತ್ರ ಗಿಲೋಟಿನ್ ಎಂದೇ ಪ್ರಸಿದ್ಧವಾಯಿತು. ಈ ಮೊದಲು ಸಾಮಾನ್ಯ ನಾಗರಿಕರನ್ನು ನೇಣಿನಿಂದಲೂ, ರಾಜ ಮನೆತನದವರನ್ನು, ಕುಲೀನರನ್ನು ಖಡ್ಗದಿಂದ ಕತ್ತರಿಸುವುದರಿಂದಲೂ (ಖಡ್ಗವನ್ನು ಹರಿತಗೊಳಿಸಿ ಒಂದೇ ಏಟಿಗೆ ಮರಣವಾಗುವಂತೆ ಮಾಡಿ ನೋವಿಲ್ಲದೇ ಸಾಯಿಸಲು ಕಟುಕರಿಗೆ ಲಂಚ ಕೊಡುತ್ತಿದ್ದರಂತೆ, ಸಾಯುವವರ ಸಂಬಂಧಿಕರು!) ಅಸಮಾನತೆ ತೋರುತ್ತಿದ್ದ ಮರಣ, ಎಲ್ಲರಿಗೂ ಒಂದೇ ರೀತಿಯ ಪದ್ಧತಿಯಿಂದಾಗಿ ಸಮಾನತೆಗೆ ದಾರಿ ಮಾಡಿತು!

ಮರಣ ದಂಡನೆಗೆ ಒಳಪಡುವವನ ಕೈ ಕಾಲುಗಳನ್ನು ಕಟ್ಟಿ ಅವನ ಕುತ್ತಿಗೆಯನ್ನು ಎತ್ತರದಿಂದ ಬೀಳುವ ಈ ಭಾರವಾದ ಕಬ್ಬಿಣದ ಕೊಡಲಿಯ ಕೆಳಗೆ ಬರುವಂತೆ ಇಡುತ್ತಿದ್ದರಂತೆ. ಎತ್ತರದಿಂದ ಬೀಳುವ ಭಾರವಾದ ಕೊಡಲಿಯಿಂದಾಗಿ ಕ್ಷಣಾರ್ಧದಲ್ಲಿ ರುಂಡ ಜಿಗಿದು ನೆಲಕ್ಕುರುಳುತ್ತಿತ್ತು. ಸಾರ್ವಜನಿಕ ಸ್ಥಳದಲ್ಲಿ ನಡೆಯುತ್ತಿದ್ದ ಈ 'ಮನರಂಜನಾ ಕಾರ್ಯಕ್ರಮ'ಕ್ಕೆ ಜನ ಮುಗಿಬಿದ್ದು ಬರುತ್ತಿದ್ದರಂತೆ. ಆ ದಿನ ಸಾಯುವ ಸರದಿ ಇರುವವರ ಯಾದಿಯನ್ನು ಒಳಗೊಂಡ ಹ್ಯಾಂಡ್ ಬಿಲ್ ಊರಲ್ಲೆಲ್ಲ ಹಂಚುತ್ತಿದ್ದರು. ಮಹಿಳೆಯರು ತಮ್ಮ ಮಕ್ಕಳೊಡಗೂಡಿ ಮುಂಗಡ ಸೀಟು ಕಾದಿರಿಸಿ, ಸ್ವೆಟರ್ ಹೆಣೆಯುವ ಕಡ್ಡಿ, ದಾರಗಳೊಡನೆ ಬಂದು ಕುಳಿತಿರುತ್ತಿದ್ದರಂತೆ! ರಾಜ ಲೂಯಿಯ ಶಿರಚ್ಛೇದನವಾದಾಗಲಂತೂ ಜನ ತಮ್ಮ ಕರವಸ್ತ್ರಗಳನ್ನು ರಾಜನ ರಕ್ತದಲ್ಲಿ ಅದ್ದಿ ಕೊಂಡೊಯ್ದರಂತೆ! ಇದೆಂಥ ಸಮೂಹ ಸನ್ನಿ! ಇದರಲ್ಲಿ ಅದೇನು ಮಾನವೀಯತೆಯನ್ನು ಕಂಡರೋ? ಕತ್ತರಿಸಿ ನೆಲಕ್ಕೆ ಬಿದ್ದ ರುಂಡಗಳು ಹೆಸರು ಕೂಗಿದರೆ ಕಣ್ಣು ತೆರೆದು ಆ ಕಡೆ ನೋಡುತ್ತಿದ್ದುವಂತೆ. ಕಪಾಳಕ್ಕೆ ಹೊಡೆದರೆ ಮುಖ ಕಿವುಚುತ್ತಿದ್ದುವಂತೆ! ಸಂಕಟವಾಗುವುದಿಲ್ಲವೇ, ಆ ದೃಶ್ಯ ಊಹಿಸಿದರೆ?

**ಮಾನವೀಯ ವೈದ್ಯ**

ಇಂತಹದ್ದೇ ಚಡಪಡಿಕೆ, ಸಂಕಟ ಈ ಯಂತ್ರದ ಜನಕನೆಂದು ಹೆಸರು ಪಡೆದ ಡಾ.ಗಿಲೋಟಿನ್‌ಗೂ ಆಗಿತ್ತಂತೆ. ಮೂಲತಃ ಮರಣ ದಂಡನೆ ಎಂಬ ಶಿಕ್ಷೆಯನ್ನೇ ವಿರೋಧಿಸಿದಾತ ಪ್ಯಾರಿಸ್‌ನ ಈ ವೈದ್ಯ. ಮರಣ ದಂಡನೆ ಶಿಕ್ಷೆಗೆ ಒಳಗಾದವರನ್ನು ಅನೇಕ ಕ್ರೂರ ರೀತಿಯ ವಿಧಾನಗಳಿಂದ ಕೊಲ್ಲುವುದನ್ನು ಕಂಡು ವೈದ್ಯನಾದ ಈತ ಮನನೊಂದು ಮರಣದಂಡನೆಯ ವಿರುದ್ಧ ಒಂದು ಚರ್ಚೆಯನ್ನೇ ಹುಟ್ಟು ಹಾಕಿದ. ಆದರೆ ಅಧಿಕಾರದಲ್ಲಿ ಇದ್ದವರಿಗೆ ಮರಣ ದಂಡನೆಯ ಅಸ್ತ್ರವಿಲ್ಲದಿದ್ದರೆ ಅವರೇ ಅತಂತ್ರರಾಗುತ್ತಿದ್ದರಲ್ಲ! ಹೀಗಾಗಿ ಆತನ ವಿನಂತಿಯನ್ನು ತಳ್ಳಿಹಾಕಿದರು.

ಆಗ ಆತ ಪ್ರತಿಪಾದಿಸಿದ್ದೇ ಈ ಗಿಲೋಟಿನ್ ಎಂಬ ಶೀಘ್ರ ಕೊಲ್ಲುವ ಯಂತ್ರವನ್ನು! 'ಮರಣ ದಂಡನೆಯೇ ಅನಿವಾರ್ಯವಾದರೆ ಅದು ಈ ರೀತಿಯಾದರೂ ಒಂದಿಷ್ಟು ಸಹ್ಯವಾಗಲಿ' ಎಂದು ಆತನ ಆಸೆಯಾಗಿತ್ತು. ಮುಂದೆ ಆತನ ಮನೆತನದ ಹೆಸರಾದ ಗಿಲೋಟಿನ್ ಈ ಆಯುಧಕ್ಕೆ ಅಂಟಿಕೊಂಡಾಗ ಈ ವೈದ್ಯನ ಸಂಬಂಧಿಕರೆಲ್ಲ ರಾಜರನ್ನು ಭೆಟ್ಟಿಯಾಗಿ ಕೊಲ್ಲುವ ಯಂತ್ರಕ್ಕೆ ತಮ್ಮ ಮನೆತನದ ಹೆಸರು ಬೇಡ ಎಂದು ವಿನಂತಿಸಿದರಂತೆ. ಆದರೆ ಅದಾಗಲೇ ಜನಮಾನಸದಲ್ಲಿ ಭದ್ರ ಸ್ಥಾನ ಪಡೆದಿದ್ದ ಹೆಸರನ್ನು ಬದಲಿಸಲು ಅಧಿಕಾರಸ್ಥರು ನಿರಾಕರಿಸಿದರಂತೆ. ಕೊನೆಗೆ ಅನಿವಾರ್ಯವಾಗಿ ಗಿಲೋಟಿನ್‌ನ ವಂಶಸ್ಥರು ತಮ್ಮ ಅಡ್ಡಹೆಸರನ್ನೇ ಬದಲಾಯಿಸಿಕೊಂಡು ಸಮಾಧಾನದ ನಿಟ್ಟುಸಿರು ಬಿಟ್ಟರಂತೆ!



**ವೈಭವೀಕರಣ**

ಈ ಯಂತ್ರವನ್ನು ತನ್ನ ಅಧಿಕಾರ ಉಳಿಸಿಕೊಳ್ಳಲು ಬಳಸಿಕೊಂಡವನೆಂದರೆ ಮ್ಯಾಕ್ಸಿಮಿಲಿಯನ್ ರೊಬಿಸ್ಪಿಯರ್ ಎಂಬ ಜಾಕೊಬಿನ್ ಕ್ರಾಂತಿ ಸರ್ಕಾರದ ಮುಖ್ಯಸ್ಥ. ಅವನ ಆಡಳಿತಕ್ಕೆ ವಿರೋಧವಾಗಿ ನಿಂತವರನ್ನು ಮಾನವೀಯತೆಯ ವಿರೋಧಿಗಳೆಂದು ಪರಿಗಣಿಸಿ, ಸಾವಿರಾರು ಜನರನ್ನು ವ್ಯವಸ್ಥಿತವಾದ ಕಾನೂನುಬದ್ಧ ಮರಣ ದಂಡನೆಗೆ ಗುರಿಪಡಿಸಿದನಂತೆ. ಹೀಗೆ ಗಿಲೋಟಿನ್‌ನ್ನು ವೈಭವೀಕರಿಸಿದವನು ಈತನೇ.

ಇಂಥ ಕ್ರೌರ್ಯವನ್ನು ವೈಭವೀಕರಿಸಿದ ಮ್ಯಾಕ್ಸಿಮಿಲಿಯನ್ ರೊಬಿಸ್ಪಿಯರ್‌ನನ್ನೇ ಜನ ಗಿಲೋಟಿನ್‌ಗೆ ಬಲಿ ಕೊಡುವುದರೊಂದಿಗೆ ಭಯಾನಕ ಆಳ್ವಿಕೆ ಕೊನೆಗೊಂಡಿತು. ಹಿಂಸೆಯಿಂದ ಹಿಂಸೆಯೇ ಜನಿಸುತ್ತದೆ ಎಂದು ಇತಿಹಾಸದ ಪುಟಗಳಲ್ಲಿ ಮತ್ತೊಮ್ಮೆ ದಾಖಲಾಯಿತು!

ಒಂದು ಅಂದಾಜಿನ ಪ್ರಕಾರ, ಮಾನವೀಯತೆಯ ಮುಸುಕಿನಲ್ಲಿ ಸತ್ತವರು ಸುಮಾರು 40 ಸಾವಿರ ಜನ! ಮೇಡಮ್ ಗಿಲೋಟಿನ್ ಅಥವಾ ನ್ಯಾಶನಲ್ ರೇಝರ್ ಎಂದು ಪ್ರೀತಿಯಿಂದ ಕರೆಸಿಕೊಳ್ಳುತ್ತಿದ್ದ ಈ ಯಂತ್ರ ಭಯ ಸೃಷ್ಟಿಸಿ ಶಾಂತವಾದದ್ದು 1939ರಲ್ಲಿ, ಕೊನೆಯ ಸಾರ್ವಜನಿಕ ಮರಣ ದಂಡನೆಯೊಂದಿಗೆ. 1933ರಲ್ಲಿ ಹಿಟ್ಲರ್ ಕೂಡ ಗಿಲೋಟಿನ್‌ನ್ನು ಪರೀಕ್ಷಾರ್ಥವಾಗಿ ತರಿಸಿ ನೋಡಿದ. ಈ ಯಂತ್ರದಿಂದ ಅವನೆಷ್ಟು ಪ್ರಭಾವಿತನಾದನೆಂದರೆ ತಕ್ಷಣ 20 ಯಂತ್ರಗಳಿಗೆ ಆರ್ಡರ್ ನೀಡಿದನಂತೆ. 1933ರಿಂದ 1945ರವರೆಗೆ ಆತನ ಸೇವೆ ಸಲ್ಲಿಸಿದ ಈ ಯಂತ್ರ ಬಲಿ ತೆಗೆದುಕೊಂಡದ್ದು ಸುಮಾರು 16500 ಜನರನ್ನು!

ನನ್ನ ತಲೆಹೊಕ್ಕ 'ಗಿಲೋಟಿನ್ ಭೂತ'ವು ಫ್ರಾನ್ಸ್ ಪ್ರವಾಸ ಮುಗಿಸಿ, ಲಂಡನ್ ತಿರುಗಾಡಿ, ಭಾರತಕ್ಕೆ ಬರಲು ಲಂಡನ್ನಿನ ಹೀಥ್ರೋ ವಿಮಾನ ನಿಲ್ದಾಣದಲ್ಲಿ ಕುಳಿತಾಗಲೂ ಕಾಡುತ್ತಲೇ ಇತ್ತು.